# ನಿಸ್ಪೋಡನೆ

## ಸಾಕ್ಷ್ಯಚಿತ್ರ ಚೈತ್ರಕಾಲಕ್ಕೆ ಆಸ್ಕರ್ ಕಾರಣವಾದೀತೆ?

ತಮಿಳಿನ 'ದಿ ಎಲಿಫೆಂಟ್ ವಿಸ್ಪರರ್ಸ್' ಡಾಕ್ಯುಮೆಂಟರಿಗೆ ದೊರೆತಿರುವ ಆಸ್ಕರ್, ಭಾರತದ ಸಾಕ್ಷ್ಯಚಿತ್ರಗಳ ನಿರ್ಮಾತೃಗಳಿಗೆ ಹುಮ್ಮಸ್ಸು ತುಂಬುವಂತಹದ್ದು. ಆಸ್ಕರ್ ಕಾರಣದಿಂದಾಗಿ, ಮತ್ತಷ್ಟು ಉತ್ತಮ ಸಾಕ್ಷ್ಯಚಿತ್ರಗಳು ಭಾರತೀಯ ಭಾಷೆಗಳಲ್ಲಿ ರೂಪುಗೊಳ್ಳಬಹುದು ಹಾಗೂ ಡಾಕ್ಯುಮೆಂಟರಿಗಳ ವೀಕ್ಷಕಬಳಗ ಸಣ್ಣ ಪ್ರಮಾಣದಲ್ಲಾದರೂ ಹೆಚ್ಚಾಗಬಹುದು.



ಈಶ್ವರ್

ತಮಿಳಿನ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರಕ್ಕೆ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ದೊರೆತಿರುವುದು ಭಾರತೀಯರು ಸಂಭ್ರಮಿಸಬೇಕಾದ ಸಂಗತಿ. 'ದಿ ಎಲಿಫೆಂಟ್ ವಿಸ್ಪರರ್ಸ್' ಜೊತೆಗೆ ತೆಲುಗಿನ 'ಆರ್‌ಆರ್‌ಆರ್' ಸಿನಿಮಾದ 'ನಾಟು ನಾಟು' ಗೀತೆ ಅತ್ಯುತ್ತಮ ಗೀತೆ ವಿಭಾಗದಲ್ಲಿ ಪ್ರಶಸ್ತಿ ಗಳಿಸಿದೆ. ರಾಜಮೌಳಿ ನಿರ್ದೇಶನದ 'ಆರ್‌ಆರ್‌ಆರ್' ಸಿನಿಮಾದ ಸಾಧನೆ ಮೆಚ್ಚತಕ್ಕದ್ದೂ, ಹೆಮ್ಮೆಪಡುವಂತಹದ್ದೂ ಆಗಿದ್ದರೂ, ತಮಿಳಿನ ಸಾಕ್ಷ್ಯಚಿತ್ರದ ಯಶಸ್ಸಿಗೆ ವಿಶೇಷ ಮಹತ್ವವಿದೆ. 'ಆರ್‌ಆರ್‌ಆರ್' ಸಿನಿಮಾ ತನ್ನ ತಾರಾಗಣದಿಂದ, ಹುಬ್ಬೇರಿಸುವಷ್ಟು ದೊಡ್ಡ ಮೊತ್ತದ ಬಜೆಟ್‌ನಿಂದ ಹಾಗೂ ಬಹುದೊಡ್ಡ ಗೆಲುವಿನಿಂದಾಗಿ ವಿಶ್ವದ ಗಮನಸೆಳೆದಿತ್ತು. ಆ ಯಶಸ್ಸಿನ ಜೊತೆಗೆ ಈಗ ಆಸ್ಕರ್ ಸಂಭ್ರಮವೂ ಸೇರಿಕೊಂಡಿದೆ. 'ಆರ್‌ಆರ್‌ಆರ್' ಸಿನಿಮಾದ ವಿಷಯದಲ್ಲಿ ದೊಡ್ಡದಾಗಿ ಕಾಣಿಸುವ ಯಾವ ಸಂಗತಿಯೂ 'ದಿ ಎಲಿಫೆಂಟ್ ವಿಸ್ಪರರ್ಸ್' ಸಾಕ್ಷ್ಯಚಿತ್ರಕ್ಕೆ ಸಂಬಂಧಿಸಿದಂತೆ ಕಾಣಿಸುವುದಿಲ್ಲ. ಇಲ್ಲಿರುವುದು ಹೃದಯಂಗಮ ಕಥೆಯಷ್ಟೇ. ಅನಾಥ ಆನೆಮರಿಯೊಂದರ ಜೀವನಕಥೆಯ ನಿರೂಪಣೆಯೊಂದಿಗೆ, ಆನೆಗಳು ಹಾಗೂ ಮಾವುತರ ನಡುವಣ ಸಂಬಂಧವನ್ನೂ ಆರ್ದ್ರವಾಗಿ ಚಿತ್ರಿಸಿದೆ. ಬೃಹತ್ತಿನ ಬಗ್ಗೆ ಎಲ್ಲರೂ ಮಾತನಾಡುವಾಗ ಪ್ರಕೃತಿಯಲ್ಲಿನ ಸಣ್ಣ ಸಣ್ಣ ಸಂಗತಿಗಳ ಬಗ್ಗೆ ಮಾತನಾಡುವುದಕ್ಕೆ ಹಾಗೂ ಆ ಅಭಿವ್ಯಕ್ತಿಯನ್ನು ಜಗತ್ತು ಗೌರವಿಸುವುದಕ್ಕೆ ವಿಶೇಷ ಮಹತ್ವವಿದೆ.

ಕಾರ್ತಿಕಿ ಗೊನ್ಸಾಲ್ವೆಸ್ ನಿರ್ದೇಶನದ 'ದಿ ಎಲಿಫೆಂಟ್ ವಿಸ್ಪರರ್ಸ್' ಆಸ್ಕರ್ ಪ್ರಶಸ್ತಿ ಗಳಿಸಿರುವುದು ಬೇರೊಂದು ಕಾರಣಕ್ಕಾಗಿ ಕೂಡ ಮಹತ್ವದ್ದು. ಈ ಸಾಧನೆ, ಭಾರತದಲ್ಲಿನ ಸಾಕ್ಷ್ಯಚಿತ್ರ ತಯಾರಕರಿಗೆ ಹುಮ್ಮಸ್ಸು–ಪ್ರೇರಣೆ ನೀಡುವಂತಹದ್ದು. ಡಾಕ್ಯುಮೆಂಟರಿ ಪ್ರಕಾರ ಜಾಗತಿಕವಾಗಿ ದೊಡ್ಡ ಮಟ್ಟದಲ್ಲಿ ಬೆಳೆದಿದ್ದರೂ, ಭಾರತದಲ್ಲಿನ್ನೂ ಅಂಬೆಗಾಲಿಡುತ್ತಿದೆ. ಡಾಕ್ಯುಮೆಂಟರಿಗಳನ್ನು ರೂಪಿಸುವುದು ಇಲ್ಲಿ ಸುಲಭವೂ ಅಲ್ಲ, ಅವುಗಳಿಗೆ ನಿರ್ದಿಷ್ಟ ಪ್ರೇಕ್ಷಕರೂ ಇಲ್ಲ. ಸಿನಿಮಾಕ್ಕೆ ಹಾಗೂ ಕಿರುತೆರೆಯ ಧಾರಾವಾಹಿಗಳಿಗೆ ಇರುವ ಜನಪ್ರಿಯತೆ ಸಾಕ್ಷ್ಯಚಿತ್ರಗಳಿಗಿಲ್ಲ. ಸಾಕ್ಷ್ಯಚಿತ್ರ ಹಾಗೂ ಕಿರುಚಿತ್ರಗಳಿಗೆ ಅತ್ಯುತ್ತಮ ವೇದಿಕೆಯಾಗಬಹುದಾದ ವಾಹಿನಿಗಳು ಧಾರಾವಾಹಿಗಳು ಹಾಗೂ ರಿಯಾಲಿಟಿ ಶೋಗಳ ಚೌಕಟ್ಟಿಗೆ ಸೀಮಿತವಾಗಿವೆ. ಇಂಥ ಸಂದರ್ಭದಲ್ಲಿ ತಮಿಳು ಡಾಕ್ಯುಮೆಂಟರಿಯ ಆಸ್ಕರ್ ಯಶಸ್ಸು, ಭಾರತದ ಸಾಕ್ಷ್ಯಚಿತ್ರಗಳ ನಿರ್ಮಾತೃಗಳಿಗೆ ಹುಮ್ಮಸ್ಸು ತುಂಬುವಂತಹದ್ದು. ಆಸ್ಕರ್ ಕಾರಣದಿಂದಾಗಿ, ಮತ್ತಷ್ಟು ಉತ್ತಮ ಸಾಕ್ಷ್ಯಚಿತ್ರಗಳು ಭಾರತೀಯ ಭಾಷೆಗಳಲ್ಲಿ ರೂಪುಗೊಳ್ಳಬಹುದು ಹಾಗೂ ಡಾಕ್ಯುಮೆಂಟರಿಗಳ ವೀಕ್ಷಕಬಳಗ ಸಣ್ಣ ಪ್ರಮಾಣದಲ್ಲಾದರೂ ಹೆಚ್ಚಾಗಬಹುದು.

ಡಾಕ್ಯುಮೆಂಟರಿ ಪ್ರಭೇದ ಬಲಗೊಳ್ಳುವುದಕ್ಕೆ ಮುಖ್ಯವಾಹಿನಿ ಸಿನಿಮಾಗಳ ನಿರ್ಮಾತೃಗಳೂ ಕೈಜೋಡಿಸಬೇಕು. ಡಾಕ್ಯುಮೆಂಟರಿಯೂ ಸಿನಿಮಾದ ಒಂದು ಸ್ವರೂಪ ಎಂದು ಜಾಗತಿಕ ಮಟ್ಟದಲ್ಲಿ ಅನೇಕರು ಒಪ್ಪಿಕೊಂಡಿದ್ದಾರೆ. ಭಾರತದಲ್ಲಿ ಮಾತ್ರ ಡಾಕ್ಯುಮೆಂಟರಿ ಸಿನಿಮಾ ಪ್ರಭೆಯಲ್ಲಿ ಕಳೆಗುಂದಿದೆ ಹಾಗೂ ಸ್ವತಂತ್ರ ಪ್ರಭೇದವಾಗಿ ಜನಪ್ರಿಯತೆ ಗಳಿಸಲು ಹೆಣಗುತ್ತಿದೆ. ಇಂಥ ಸಂದರ್ಭದಲ್ಲಿ ತಾರಾ ವರ್ಚಸ್ಸಿನ ಜನಪ್ರಿಯ ನಟರು ಡಾಕ್ಯುಮೆಂಟರಿಗಳನ್ನು ಪ್ರೋತ್ಸಾಹಿಸಬೇಕಾಗಿದೆ. ಉತ್ತಮ ಡಾಕ್ಯುಮೆಂಟರಿಗಳು ಬಂದಾಗ ಅವುಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ನಿರ್ಮಾಣ–ನಟನೆಯಲ್ಲೂ ತೊಡಗಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಪುನೀತ್ ರಾಜ್‌ಕುಮಾರ್ ನಿರ್ಮಾಣ–ನಟನೆಯ 'ಗಂಧದಗುಡಿ' ಡಾಕ್ಯುಡ್ರಾಮ ನೆನಪಿಸಿಕೊಳ್ಳಬಹುದು. ಕರ್ನಾಟಕದ ಪ್ರಾಕೃತಿಕ ವೈವಿಧ್ಯದ ಬಗ್ಗೆ ಅರಿವು–ಅಭಿಮಾನ ಮೂಡಿಸುವ, ಅಮೋಘವರ್ಷ ನಿರ್ದೇಶನದ 'ಗಂಧದಗುಡಿ' ಚಿತ್ರಮಂದಿರಗಳಲ್ಲೂ ತೆರೆಕಂಡು ಯಶಸ್ವಿಯಾಗಿತ್ತು. ಪುನೀತ್ ಕಾರಣದಿಂದಾಗಿ ಈ ಡಾಕ್ಯುಡ್ರಾಮ ದೊಡ್ಡ ಪ್ರಮಾಣದಲ್ಲಿ ಜನರನ್ನು ತಲುಪುವುದು ಸಾಧ್ಯವಾಗಿತ್ತು. ಇಂಥ ಪ್ರಯತ್ನಗಳು ಕನ್ನಡದಲ್ಲಿ ಹಾಗೂ ಭಾರತೀಯ ಭಾಷೆಗಳಲ್ಲಿ ಹೆಚ್ಚಬೇಕು.

ಹೊಸ ತಲೆಮಾರಿಗೆ ದೃಶ್ಯಮಾಧ್ಯಮದ ಬಗ್ಗೆ ಅಪಾರ ಆಸಕ್ತಿ–ಆಕರ್ಷಣೆಯಿದೆ. ಸಿನಿಮಾ ಮಾಧ್ಯಮ ಎಲ್ಲರಿಗೂ ಕೈಗೆಟಕುವಂತಹದ್ದಲ್ಲ. ಹಾಗಾಗಿ, ದೃಶ್ಯಮಾಧ್ಯಮದ ಬಗ್ಗೆ ಆಸಕ್ತಿಯುಳ್ಳ ತರುಣ ತರುಣಿಯರು ಸಾಕ್ಷ್ಯಚಿತ್ರಗಳ ನಿರ್ಮಾಣದಲ್ಲಿ ತೊಡಗಿಕೊಳ್ಳಬಹುದು. ಹಾಗೆಂದು, ಸಾಕ್ಷ್ಯಚಿತ್ರ ನಿರ್ಮಾಣ ಸುಲಭ ಎಂದರ್ಥವಲ್ಲ. ಅಪಾರ ಅಧ್ಯಯನ, ಸಂಶೋಧನೆಯನ್ನು ಬಯಸುವ ಸಾಕ್ಷ್ಯಚಿತ್ರ ನಿರ್ಮಾಣ, ಕಸುಬುದಾರ ತಂತ್ರಜ್ಞರನ್ನೂ ಅಪೇಕ್ಷಿಸುತ್ತದೆ. ಮುಖ್ಯವಾಹಿನಿಯ ಸಿನಿಮಾದಷ್ಟು ಅಲ್ಲದಿದ್ದರೂ ತಕ್ಕಮಟ್ಟಿಗಿನ ಬಂಡವಾಳವೂ ಅಗತ್ಯ. ಈ ನಿಟ್ಟಿನಲ್ಲಿ ಸರ್ಕಾರ ಕೂಡ ಸಾಕ್ಷ್ಯಚಿತ್ರ ನಿರ್ಮಾತೃಗಳ ನೆರವಿಗೆ ಬರಬೇಕು. ಸಿನಿಮಾಕ್ಕೆ ಸಹಾಯಧನ ಹಾಗೂ ಪ್ರಶಸ್ತಿಗಳನ್ನು ನೀಡುವಂತೆ, ಉತ್ತಮ ಸಾಕ್ಷ್ಯಚಿತ್ರಗಳಿಗೂ ನೆರವು–ಉತ್ತೇಜನ ನೀಡುವ ಸಾಧ್ಯತೆಗಳ ಬಗ್ಗೆ ಸರ್ಕಾರ ಪರಿಶೀಲಿಸಬೇಕು. ಅಂತರರಾಷ್ಟ್ರೀಯ ಹಾಗೂ ಸ್ಥಳೀಯ ಚಿತ್ರೋತ್ಸವಗಳಲ್ಲಿ ಹೆಚ್ಚಿನ ಸಂಖ್ಯೆಯ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಿಕ್ಕೆ ಅವಕಾಶ ಕಲ್ಪಿಸಬೇಕು.

■ **ರಘುನಾಥ ಚ.ಹ.**